ಮಾಡುತ್ತಿದ್ದೀರಿ ? ನಿಮಗೆ ನಾವು ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿದ್ದೇವೆ. ಆದರೂ ಕೂಡ ಜನತೆಯ ಪ್ರತಿಭಟನೆಗೂ ಕೂಡ ತಾವುಗಳು ಸ್ಪಂದಿಸದೇ ತಮ್ಮ ನಿಲುವನ್ನೆ ಬಿಗಿಯಾಗಿ ಹಿಡಿದು ಕೊಂಡು ಜನತೆಗೆ ಅನ್ಯಾಯ ಮಾಡಿದ್ದೀರಿ. ಸರಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಬಿ. ಜೆ. ಪಿ. ಯ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಈ ನಿಚಾರದ ಬಗ್ಗೆ ಸಾಕಷ್ಟು ವಿಶ್ಲೇಷಣೆಯನ್ನು ಈಗಾಗಲೇ ಮಾಡಿದ್ದಾರೆ. ರಸ್ತೆ ಸಾರಿಗೆ ಸಂಸ್ಥೆಯಿಂದ ಕನಿಷ್ಠ ಲಾಭ ಬರುವಂತಾಗ ಬೇಕು, ಆ ಸಂಪನ್ಮೂಲಗಳನ್ನು ಬೇರೆ ಕಡೆಗೆ ಬಳಸಿಕೊಳ್ಳಬೇಕು ಅಂದರೆ ಅದು ಸಾಧ್ಯವಿಲ್ಲದ ಮಾತು ಎಂದು ಹೇಳ ಬೇಕಾಗುತ್ತದೆ ಇಂಥ ಸಾರ್ವಜನಿಕ ಸೇವೆಯಲ್ಲಿ ಲಾಭವನ್ನು ನಮ್ಮ ದೃಷ್ಟಿಯಲ್ಲಿ ಏಕಮೇವ ಗುರಿಯಾಗಿ ಇಟ್ಟುಕೊಳ್ಳುವುದು ಸಾಧ್ಯವಾಗಲಾರದು. ಸ್ವಲ್ಪ ನಷ್ಟ ಆದರೂ ನಾವು ಅದನ್ನು ಸಹಿಸಿಕೊಳ್ಳಬೇಕಾಗುತ್ತದೆ. ಇಂಥ ಬಾಬುಗಳ ಬಗ್ಗೆ ನಾವು ಕೇಂದ್ರ ಸರಕಾರದವರ ಸಬ್ಸಿಡಿಗಾಗಿ ಕೇಳುವ ಉದ್ದೇಶವೂ ಅದೇ ಆಗಿರುತ್ತದೆ. ಅವರು ಕೊಡಲಿ. ಬಿಡಲಿ ಆ ಪ್ರಶ್ನೆ ಬೇರೆ. ಆದರೆ ಮೂಲ ಉದ್ದೇಶ ಸಾರ್ವಜನಿಕ ಹಿತಾಸಕ್ತಿ ಆಗಿರುತ್ತದೆ. ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಸಾರ್ವಜನಿಕ ಸಂಸ್ಥೆಯಾದ ಕೆಎಸ್‌ಆರ್‌ಟಿಸಿ ಲಾಭ ಮಾಡುತ್ತದೆ, ಆದರಿಂದ ನಾವು ನಮ್ಮೆ ಸಂಪನ್ಮೂಲಗಳನ್ನು ಹೆಚ್ಚು ಮಾಡುತ್ತೇವೆ ಎನ್ನತಕ್ಕಂಥಾದ್ದು ಸರಿಯಾಗಲಾರುದು. ಗ್ರಾಮಾಂತರ ಪ್ರದೇಶದ ಜನರು ನಿನ್ನೆ ಮೊನ್ನೆ ಳೆ ನೇ ತಾರೀಖು ಶಾಸನ ಸಭೆ ಸೇರಿದ ದಿವಸ ಈ ಬಗ್ಗೆ ೧೦ ಸಾವಿರಕ್ಕಿಂತಲೂ ಹೆಚ್ಚಿಗೆ ಜನರು ಈ ಬಗ್ಗೆ ಪ್ರತಿಭಟನ ಮಾಡಿ ಜೈಲಿಗೆ ಹೋಗಿದ್ದಾರೆ. ಇದೂ ಸಹ ತಮ್ಮ ಗಮನಕ್ಕೆ ಬಂದಿರುವ ವಿಚಾರವೇ ಆಗಿದೆ. ಇಂಥದ್ದರಲ್ಲಿಯೂ ಕೂಡ ನೀವು ಮೊಂಡುತನ ಮಾಡುವುದು ಸರಿಯಾಗಲಾರದು ಎಂದು ನನ್ನ ಭಾವನೆ. ನಾವುಗಳು ನಮ್ಮ ಜನರ ಅಭಿಪ್ರಾಯಗಳಿಗೆ ಸ್ಪಂದಿಸಲೇ ಬೇಕಾಗುತ್ತದೆ. ದರದಲ್ಲಿ ಹೆಚ್ಚಳವನ್ನು ತಾವುಗಳು ಏನು ಮಾಡಿದ್ದೀರಿ, ಅದನ್ನು ಬೇರೆ ರೂಪದಲ್ಲಿ ಸರಿದೂಗಿಸಿಕೊಳ್ಳುವುದಕ್ಕೆ ಸಾಧ್ಯತೆ ಇತ್ತು ಅಂಥ ಕೆಲಸ ಮಾಡದೆ ಭಾರಿ ಪ್ರಮಾಣದಲ್ಲಿ ಬಸ್‌ದರವನ್ನು ಏರಿಸಿ ನಷ್ಟವನ್ನು ಸರಿದೂಗಿಸತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಇದನ್ನು ನಾವು ಪ್ರತಿಭಟಿಸದೇ ಬೇರೆ ವಿಧಿ ಇಲ್ಲ ಎನ್ನುವಂಥ ಮಾತನ್ನು ಹೇಳಿ ಸರಕಾರದ ಈಗಿನ ನಿಲುವನ್ನು ಈ ದಿಶೆಯಲ್ಲಿ ಪ್ರತಿಭಟಿಸಿ ನಾವುಗಳು ಸಭಾತ್ಯಾಗ ಮಾಡುತ್ತೇವೆ.

(ಜನತಾ ದಳದ ಮಾನ್ಯ ಸದಸ್ಯರುಗಳು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ.—ನಾವು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರದ ಬಗ್ಗೆ ಕನಿಷ್ಟ ಪಕ್ಷ ಒಂದು ಸದನದ ಸಮಿತಿಯನ್ನು ಮಾಡಿ ಪರಿಶೀಲಿಸಿ ಎಂದು. ಆದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಸಾರ್ವಜನಿಕ ಉದ್ಯಮಗಳ ಸಮಿತಿಯೊಂದು ಇದೆ. ಆ ಸಮಿತಿ ತತ್‌ಕ್ಷಣವೇ ಈ ಬಗ್ಗೆ ಪರಿಶೀಲನೆ ಕಾರ್ಯ ಮಾಡಬಹುದು ಎಂದಿದ್ದಾರೆ. ಪಿ. ಯು. ಸಿ. ಗೆ ರಾಜ್ಯದಲ್ಲಿನ ಸಾರ್ವಜನಿಕ ಉದ್ಯಮಗಳ ಕೆಲಸದ ಭಾರ ಸಾಕಷ್ಟು ಇದೆ. ನಾವು ಕೇಳಿರತಕ್ಕಂಥಾದ್ದು ಇವೊತ್ತು ದರದ ಹೆಚ್ಚಳಕ್ಕೆ ಕಾರಣವಾದ ಅಂಶಗಳನ್ನು ನೀವುಗಳು ಹೇಳಿದಂತೆ ಸಮಗ್ರವಾಗಿ ಪರಿಶೀಲಿಸಲು ಸದನ ಸಮಿತಿ ರಚನೆ ಆಗಬೇಕೆಂದು. ಪೆಟ್ರೋಲ್, ಡೀಸಲ್, ಟೈರ್, ಭಾಷಿ, ಮುಂತಾಗಿ ಬೆಲೆ ಹೆಚ್ಚಳದ ಕಾರಣ ಪ್ರಯಾಣದ ದರವನ್ನು ಹೆಚ್ಚಿಸಲಾಯಿತು ಎಂಬುದು ನೀವು ಕೊಡುತ್ತಿರುವ ಕಾರಣ ಇಂಥ ಸಾಮಗ್ರಿಗಳ ಬೆಲೆ ಎಷ್ಟರಮಟ್ಟಿಗೆ ಹೆಚ್ಚಿಗೆ ಆಗಿದೆ ನೀವು ಹೆಚ್ಚಿಗೆ ಮಾಡಿದ ಪ್ರಯಾಣದ ದರದ ಪ್ರಮಾಣ ಏಷ್ಟು ? ಇವೇ ಮುಂತಾದ ಸೀಮಿತವಾಗಿರತಕ್ಕಂಥ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೋಸ್ಕರವಾಗಿ ಒಂದು ಸಮಿತಿಯನ್ನು ಮಾಡಿ ಎಂದು ನಾವು ಕೇಳಿಕೊಂಡಿದ್ದೇವೆ ಆದರೆ ಸರಕಾರದವರು ಈ ಬಗ್ಗೆ ಒಪ್ಪಿಕೊಳ್ಳಲು ಸಿದ್ಧವಿಲ್ಲ. ಜನರ ಹಿತ ದೃಷ್ಟಿಯಿಂದ ಸರಕಾರದ ಈ ನಿಲುವನ್ನು ಪ್ರತಿಭಟಿಸುವುದು ನಮ್ಮ ಕರ್ತವ್ಯ. ಆದುದರಿಂದ ನಾವು ಸಭಾತ್ಯಾಗ ಮಾಡುತ್ತೇವೆ.

(ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಉಪಾಧ್ಯಕ್ಷರು.—ಈಗ ಶ್ರೀ ರಾಮಲಿಂಗ ರೆಡ್ಡಿಯವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೊನೆಯದಾಗಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಬಸ್ ದರದಲ್ಲಿ ಸ್ವಲ್ಪವಾದರೂ ಕಡಿಮೆ ಮಾಡುವ ಔದಾರ್ಯವನ್ನು